ದಿಃ 09-10-2023 ರಂದು ಪ್ರಾಸಾ 2 ಸಾಕ್ಷಿಯನ್ನು ಪುನಃ ಕರೆಯಿಸಿ ಸತ್ಯಪ್ರತಿಜ್ಞೆ ಬೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲು : ಆರೋಪಿತರ ಪರ ಶ್ರೀ ವೈಜೆಆರ್ ವಕೀಲರಿಂದ

4). ನಮ್ಮ ಸಮುದಾಯದವರು ನಮ್ಮ ಓಣಿಯಲ್ಲಿರುವ ಸಾರೆಮ್ಮ ದೇವಸ್ಥಾನದ ಬಳಿ ಮದುವೆಯಾಗುತ್ತಾರೆ ಎಂದರೆ ಸರಿ. ಫಕ್ಕಿರೇಶ್ವರ ದೇವಸ್ಥಾನದಲ್ಲಿ ಸಾಮೂಹಿಕ ಮದುವೆಯಾದ ವಿಚಾರಕ್ಕೆ ಸಂಬಂಧಪಟ್ಟಂತೆ ನಮ್ಮ ತಂದೆ-ತಾಯಿಯವರು ಪೊಲೀಸರಿಗೆ ದಾಖಲೆ ಕೊಟ್ಟಿರಲಿಲ್ಲ. ಫಕ್ಕಿರೇಶ್ವರ ದೇವಸ್ಥಾನದಲ್ಲಿ ಸಾಮೂಹಿಕ ಮದುವೆಯಾಗುವಾಗ ನಮ್ಮ ಮದುವೆ ಮಾಡಿಸುವುದಾಗಿ ನಮ್ಮ ಕೇರಿಯಲ್ಲಿರುವ ಹಿರಿಯರು ಹೇಳಿದ್ದರು. ಸಾಮೂಹಿಕ ಮದುವೆಯಲ್ಲಿ ಮದುವೆಯಾಗಬೇಕಾದರೆ ನಮಗೆ ಮದುವೆಯಾಗಿರುವುದಿಲ್ಲ ಎಂದು ಪಂಚಾಯತಿಯಿಂದ ಪ್ರಮಾಣಪತ್ರವನ್ನು ಪಡೆದು ದೇವಸ್ಥಾನದ ಕಮೀಟಿಯವರಿಗೆ ಕೊಟ್ಟಿರಲಿಲ್ಲ. ಅಂತಹ ಸಾಮೂಹಿಕ ಮದುವೆಗಳಿಗೆ ನೋಂದಣಿ ಮಾಡಿಸಿದವರು ರೂ.501/- ಅಥವಾ ರೂ.1001/- ಈ ರೀತಿ ದೇಣಿಗೆ ನೀಡಿ ರಸೀದಿ ಪಡೆದುಕೊಳ್ಳುತ್ತಾರೆ ಎಂದರೆ ಸರಿ. ಆ ರೀತಿ ನಮ್ಮ ಮನೆಯವರು ದೇಣಿಗೆ ನೀಡಿ ಪಡೆದ ರಸೀದಿಯನ್ನು ಪೊಲೀಸರಿಗೆ ಕೊಟ್ಟಿರಲಿಲ್ಲ ಆದರೆ ಮದುವೆಯಾಗಬೇಕೆಂದು ನಾವು ಆ ದೇವಸ್ಥಾನದ ಬಳಿ ಹೋಗಿದ್ದೆವು ಎಂದು ಸಾಕ್ಷಿದಾರರು ಹೇಳುತ್ತಾರೆ. ಸಾಮೂಹಿಕ ಮದುವೆಯಾಗಬೇಕಾದರೆ ದೇವಸ್ಥಾನದ ಕಮೀಟಿಯಲ್ಲಿ ಹೆಸರು ಬರೆಯಿಸಿ ರಸೀದಿಯನ್ನು ಪಡೆದುಕೊಂಡರೆ ಮಾತ್ರ ಮದುವೆಯಾಗಲು ಅವಕಾಶ ಇರುತ್ತದೆ ಎಂದರೆ ನಾವುಗಳು ರೂ.5000/- ಕೊಟ್ಟಿದ್ದೆವು. ಆ ಹಣವನ್ನು ಹಿರಿಯರು ಹೋಗಿ ಕೊಟ್ಟಿದ್ದರು.

5). ಸವರ್ಣೀಯರ ಜೊತೆ ಮಾಡಿಕೊಳ್ಳಲು ಅವಕಾಶ ಮಾಡಿಕೊಡುವುದಿಲ್ಲ ನಿಮ್ಮ ಕಾಲೋನಿಯಲ್ಲಿರುವ ಅಂಬೇಡ್ಕರ ಭವನದಲ್ಲಿ ವಿವಾಹ ಮಾಡಿಕೊಳ್ಳಿ ಎಂದು ಆರೋಪಿಗಳು ನಮ್ಮ ಹಿರಿಯರಿಗೆ ಹೇಳಿದ್ದರು. ಆ ಹಿರಿಯರು ಯಾರು ಎಂದು ಹೆಸರುಗಳನ್ನು ಹೇಳಲಾಗುವುದಿಲ್ಲ. ಆರೋಪಿಗಳು ಅವಾಚ್ಯ ಶಬ್ದಗಳಿಂದ ಬೈಯ್ದು ಜೀವ ಬೆದರಿಕೆ ಹಾಕಿರುವುದನ್ನು ನಾನು ಕೇಳಿಸಿಕೊಂಡೆ. ಪೊಲೀಸರು ನನ್ನ ಹೇಳಿಕೆಯಲ್ಲಿ ಏನು ಬರೆದಿದ್ದಾರೆಂದು ನನಗೆ ಗೊತ್ತಿಲ್ಲ. ನನಗೆ ಯಾವುದೇ ವಿಚಾರ ಗೊತ್ತಿರದೇ ಇದ್ದರೂ ಊರಿನ ಹಿರಿಯರ ಹಾಗೂ ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

6). ಫಕ್ಕೀರೇಶ್ವರ ಜಾತ್ರೆ ಸಮಯ ಆರೋಪಿಗಳು ನಮ್ಮ ಜಾತಿ ನಿಂದನೆ ಮಾಡಿರಲಿಲ್ಲ ಮತ್ತು ಜೀವ ಬೆದರಿಕೆ ಹಾಕಿರಲಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತ ಉಲ್ಲೇಖನದ ಮೇರೆಗೆ ಸಾಕ್ಷ್ಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

(ಸಿ ಚಂದ್ರಶೇಖರ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಪ್ಪಳ